ಶುರುವಾಯಿತು. ವಿಶ್ವವಿದ್ಯಾಲಯ ಬಂದ್ ಆಯಿತು. ವಿದ್ಯಾರ್ಥಿಗಳು ಸಣ್ಣಪುಟ್ಟ ಗುಂಪುಗಳಲ್ಲಿ ಚರ್ಚೆ ಶುರು ಮಾಡಿದರು. ಲೋಹಿಯಾ ಕೂಡ ಇಂಥದೊಂದು ಗುಂಪಿನಲ್ಲಿದ್ದರು. ಆ ಗುಂಪಿನಲ್ಲಿದ್ದ ಲೋಹಿಯಾರನ್ನು ಗಮನಿಸಿದ ನಾಝಿವಾದಿಯೊಬ್ಬ, 'ನೀನು ನಾಝಿ ಅಲ್ಲದಿದ್ರೆ ಇಲ್ಲಿಂದ ಜಾಗ ಖಾಲಿ ಮಾಡು' ಅಂದ.

ಲೋಹಿಯಾ ದಿಟ್ಟವಾಗಿ ಹೇಳಿದರು: 'ಈ ನೆಲ ನಿನ್ನದೇನು? ಈ ನೆಲದಲ್ಲಿ ನಿಂತುಕೊಳ್ಳಲು ನಿನಗೆಷ್ಟು ಅಧಿಕಾರ ಇದೆಯೋ ನನಗೂ ಅಷ್ಟೇ ಅಧಿಕಾರ ಇದೆ. ನಾನು ಇಲ್ಲಿಂದ ಕದಲುವುದಿಲ್ಲ.'

ನಾಝಿ ನಾಯಕನೊಬ್ಬ ಮಧ್ಯ ಪ್ರವೇಶಿಸಿ ತಮ್ಮ ಪಕ್ಷದ ಉದ್ಧಟ ಸದಸ್ಯನನ್ನು ಗದರಿ, ಲೋಹಿಯಾರ ಕ್ಷಮಾಪಣೆ ಕೇಳಿದ. ಈ ಪ್ರಶ್ನೆ ಕೇಳಿದ ಲೋಹಿಯಾ ಇಪ್ಪತ್ತೈದು ವರ್ಷಗಳ ನಂತರ, ಯಾರು ಎಲ್ಲಿ ಬೇಕಾದರೂ ಹೋಗಿ ನೆಲೆಸುವ, ಪಾಸ್‌ಪೋರ್ಟ್ ಇಲ್ಲದೆ ದೇಶವಿದೇಶಗಳಿಗೆ ಹೋಗುವ 'ವಿಶ್ವಪ್ರಜೆ' ಪರಿಕಲ್ಪನೆಯ ಸಮಾಜವಾದಿ ಸಿದ್ಧಾಂತವನ್ನೇ ಮಂಡಿಸಿದರು.

ಜರ್ಮನ್ ರಾಜಕಾರಣವನ್ನು ಅರಿಯುತ್ತಲೇ ಭಾರತಕ್ಕೆ ಸಂಬಂಧಿಸಿದ ರಾಜಕೀಯ ಚಟುವಟಿಕೆಯನ್ನೂ ಲೋಹಿಯಾ ಮುಂದುವರಿಸಿದ್ದರು. ಬರ್ಲಿನ್‌ನಲ್ಲಿ 'ಇಂಡಿಯನ್ ನ್ಯಾಷನಲಿಸ್ಟ್ ಸ್ಟೂಡೆಂಟ್ಸ್' ಸಭೆಗಳಿಗೆ ಹೋಗುತ್ತಿದ್ದರು. 'ಇಂಡಿಯನ್ ಅಸೋಸಿಯೇಷನ್ ಆಫ್ ಸೆಂಟ್ರಲ್ ಯುರೋಪ್' ಸಂಘಟನೆಯ ಕಾರ್ಯದರ್ಶಿಯಾದರು.

ರಾಜಕೀಯ ಚಿಂತನೆ, ಕ್ರಿಯೆ, ಗಂಭೀರ ಅಧ್ಯಯನ ಎಲ್ಲವೂ ಲೋಹಿಯಾ ವ್ಯಕ್ತಿತ್ವದ ಭಾಗವಾಗತೊಡಗಿದವು. ಒಮ್ಮೆ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಐನ್‌ಸ್ಟೈನರ ಕ್ಲಾಸಿಗೂ ಲೋಹಿಯಾ ಹೋದರು. ಐನ್‌ಸ್ಟೈನ್ ಸುತ್ತ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕೂತಿದ್ದರು; ಒಬ್ಬರ ಪ್ರಶ್ನೆಗೆ ಮತ್ತೊಬ್ಬರು ಉತ್ತರ ಕೊಡುತ್ತಿದ್ದರು. ಸ್ನೇಹ ಸೂಸುತ್ತಿದ್ದ ಐನ್‌ಸ್ಟೈನ್ ವಿದ್ಯಾರ್ಥಿ, ವಿದ್ಯಾರ್ಥಿನಿಯರೇ ತಮ್ಮ ಉತ್ತರ ಹುಡುಕಿಕೊಳ್ಳಲು ದಾರಿ ತೋರಿಸುತ್ತಿದ್ದರು. ಲೋಹಿಯಾ ಕಣ್ಣಿಗೆ ಅವರು ಋಷಿಯಂತೆ ಕಂಡದ್ದು ಅಚ್ಚರಿಯಲ್ಲ.

ತಮ್ಮ ಇಪ್ಪತ್ತೊಂದು–ಇಪ್ಪತ್ತಮೂರನೆಯ ವಯಸ್ಸಿನ ನಡುವೆ ಲೋಹಿಯಾ ಯುರೋಪಿನ ಎರಡು ಮಹತ್ವದ ಫಿಲಾಸಫಿಗಳಾದ ಮಾರ್ಕ್ಸ್‌ವಾದ ಹಾಗೂ ಹೆಗೆಲ್‌ವಾದಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದರು. ಜಗತ್ತಿನ ಚರಿತ್ರೆಯ ಚಲನೆಯ ದಿಕ್ಕುಗಳ ಬಗ್ಗೆ ಮಾರ್ಕ್ಸ್‌ವಾದಿಗಳು, ಹೆಗೆಲ್‌ವಾದಿಗಳ ಜೊತೆ ಗಂಭೀರ ಚರ್ಚೆ ನಡೆಸಿದರು. ಕಾರ್ಲ್‌ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಕೃತಿಯನ್ನು ಜರ್ಮನ್ ಭಾಷೆಯಲ್ಲೇ ಅಧ್ಯಯನ ಮಾಡಲೆತ್ನಿಸಿದರು. ಜಗತ್ತಿನ ಮಹತ್ತರ ಚಿಂತನೆಗಳನ್ನು ಆಳವಾಗಿ ಗ್ರಹಿಸಹೊರಟಿದ್ದ ಲೋಹಿಯಾರ ಜೀವಮಾನದ ಬೌದ್ಧಿಕ ಸಿದ್ಧತೆಗಳು ಇಲ್ಲಿ ಶುರುವಾದವು. ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗ ಲೋಹಿಯಾರ ಬೌದ್ಧಿಕ ಮಟ್ಟ ಎಷ್ಟು ಎತ್ತರದಲ್ಲಿತ್ತು ಎಂಬುದು ಬರ್ಲಿನ್ ಬಿಟ್ಟ ಇಪ್ಪತ್ತು ವರ್ಷಗಳ ನಂತರ ಹೈದರಾಬಾದಿನಲ್ಲಿ ಅವರು ಮಾಡಿದ ಉಪನ್ಯಾಸವೊಂದರಲ್ಲಿ ದಾಖಲಾಗಿದೆ:

'ಇಪ್ಪತ್ತು ವರ್ಷಗಳ ಹಿಂದೆ ಬರ್ಲಿನ್ ವಿಶ್ವವಿದ್ಯಾಲಯದ ಉಪಾಹಾರ ಮಂದಿರದ ಒಂದು ಮೇಜಿನ ಸುತ್ತ ಇತಿಹಾಸದ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ಕೆಲವರು ಹೆಗೆಲ್‌ವಾದಿಗಳಾಗಿದ್ದರು; ಕೆಲವರು ಮಾರ್ಕ್ಸ್‌ವಾದಿಗಳಾಗಿದ್ದರು. 'ಪ್ರೌಢ ನಾಗರಿಕತೆಯಿದ್ದ ಭಾರತ ಹೇಗೆ ವಿದೇಶಿ ಆಳ್ವಿಕೆಗೆ ತುತ್ತಾಯಿತು?' ಎಂದು ನಾನು ಅವರನ್ನು ಕೇಳಿದೆ. ಅವರಲ್ಲಿ ಯಾರಲ್ಲೂ ಉದ್ಧಟತನವಿರಲಿಲ್ಲ. ಇತಿಹಾಸದ ಅಧ್ಯಯನ ಮಾಡಿದವರಿಗೆ ಸಹಜವಾಗಿಯೇ ಇರಬೇಕಾದ ವಿನಯವಿತ್ತು. ಮಾರ್ಕ್ಸ್‌ವಾದಿ ಉತ್ತರಿಸಲು ಪ್ರಯತ್ನಿಸಿದ: 'ಭಾರತದಲ್ಲಿ ಮಾರುಕಟ್ಟೆ ವ್ಯಾಪಾರ ಗ್ರಾಮ ಮಟ್ಟದಲ್ಲೇ ಉಳಿಯಿತು. ಅದು ರಾಷ್ಟ್ರ ಮಟ್ಟದವರೆಗೆ ಬೆಳೆಯಲು ಅಶಕ್ತವಾಯಿತು; ದೇಶದಲ್ಲಿ ಸಾಕಷ್ಟು ಭೂರಹಿತ ಶ್ರಮಿಕವರ್ಗ ಇರಲಿಲ್ಲ; ಏಕೆಂದರೆ ಭಾರಿ ಪ್ರಮಾಣದಲ್ಲಿ ಒಕ್ಕಲೆಬ್ಬಿಸುವಿಕೆ ಇರಲಿಲ್ಲ; ಕೈಗಾರಿಕೆಗಳಾಗಿ ಬೆಳೆಯುವ ಉತ್ಸಾಹವುಳ್ಳ ವಾಣಿಜ್ಯ ಬಂಡವಾಳ ಹೇರಳವಾಗಿ ಇರಲಿಲ್ಲ ಜೊತೆಗೆ, ಇತರರನ್ನು ಕೊಳ್ಳೆ ಹೊಡೆಯುವ ಅವಕಾಶ ಭಾರತಕ್ಕೆ ಇರಲಿಲ್ಲ.'

'ಮಾರ್ಕ್ಸ್‌ವಾದಿ ಕೊಟ್ಟ ಉತ್ತರ ಬಹುಮಟ್ಟಿಗೆ ಸಮಗ್ರವಾದ ಉತ್ತರವಾಗಿತ್ತು ಹಾಗೂ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಹೋಲಿಸಿ ನೋಡಿದಾಗ ಸರಿಯಾಗಿತ್ತು. ಬ್ರಿಟಿಷರು ಭಾರತವನ್ನು ಗೆಲ್ಲುವುದಕ್ಕೆ ಮುಂಚೆ ನಮ್ಮ ವ್ಯಾಪಾರ ವಹಿವಾಟು ಗ್ರಾಮಮಟ್ಟದಲ್ಲಿತ್ತು. ಭಾರೀ ಪ್ರಮಾಣದಲ್ಲಿ ಭೂರಹಿತ ಶ್ರಮಿಕವರ್ಗ ನಮ್ಮಲ್ಲಿ ಇರಲಿಲ್ಲ. ನಮ್ಮ ವಾಣಿಜ್ಯ ಬಂಡವಾಳದ ವಿಷಯ ಚರ್ಚಾಸ್ಪದವಾಗಿದೆ. ಆದರೂ ನಾನು ಈ ಮಾರ್ಕ್ಸ್‌ವಾದಿಯನ್ನು ಕೇಳಿದೆ: 'ನೀನು ಪಟ್ಟಿ ಮಾಡಿದ ಅಂಶಗಳು ಇಂಗ್ಲೆಂಡಿನಲ್ಲಿ ಅಥವಾ ಪಶ್ಚಿಮ ಯುರೋಪಿನ ಇತರ ದೇಶಗಳಲ್ಲಿ ಯಾಕೆ ಕಾಣಿಸಿಕೊಂಡವು? ಭಾರತದಲ್ಲಿ ಯಾಕೆ ಕಾಣಿಸಿಕೊಳ್ಳಲಿಲ್ಲ?'

ಅದಕ್ಕೆ ಮಾರ್ಕ್ಸ್‌ವಾದಿಯಲ್ಲಿ ಉತ್ತರವಿರಲಿಲ್ಲ.

ಆಗ ಹೆಗೆಲ್‌ವಾದಿ ಉತ್ತರಿಸಲು ಉತ್ತೇಜಿತನಾಗಿ ರಂಗಕ್ಕಿಳಿದ. ಚರಿತ್ರೆಯ ಚೈತನ್ಯದ ಬಗ್ಗೆ ಏನೋ ಹೇಳಲು ಪ್ರಯತ್ನಿಸಿದ: ವಿದೇಶಿ ಆಕ್ರಮಣವನ್ನು ತಡೆಗಟ್ಟಲು ಆ ಸಮಯದಲ್ಲಿ ಚರಿತ್ರೆಯ ಚೈತನ್ಯ ಭಾರತದ ಪರವಾಗಿ ಏಕೋ ಮನಸ್ಸು ಮಾಡಲಿಲ್ಲ; ಜನತೆ ನಿತ್ರಾಣವಾಗಿತ್ತು ಎಂದ. ಅದು ಕೂಡ ತೃಪ್ತಿಕರವಾದ ಉತ್ತರವಾಗಿರಲಿಲ್ಲ. ಇತಿಹಾಸದ ಗತಿಯನ್ನು ಕುರಿತು ಅಂತಿಮ ಉತ್ತರ ಕೊಡಲೆತ್ನಿಸುವ ಇತಿಹಾಸದ ಎರಡು ಮುಖ್ಯ ವೈಚಾರಿಕ ಸಿದ್ಧಾಂತಗಳಾದ ಮಾರ್ಕ್ಸ್‌ವಾದ ಮತ್ತು ಹೆಗೆಲ್‌ವಾದಗಳ ಈ ವಿಫಲತೆ ಕಂಗೆಡಿಸುವಂತಿತ್ತು. ಬಾಹ್ಯ ಲಕ್ಷಣಗಳನ್ನು ಗುರುತಿಸುವ ಮಟ್ಟಿಗೆ ಮಾರ್ಕ್ಸ್‌ವಾದಿ ಉತ್ತಮ ಉತ್ತರ ನೀಡಿದ್ದ. ಆದರೆ ಈ ಸಂಗತಿಗಳಿಗೆ ಕಾರಣ ಹುಡುಕುವುದರಲ್ಲಿ ಅವನು ಹೆಗೆಲ್‌ವಾದಿಯಷ್ಟೇ ಕತ್ತಲಲ್ಲಿದ್ದ.'

ಬರ್ಲಿನ್‌ನಲ್ಲಿದ್ದಾಗ ಭೇಟಿಯಾದ ಅಮೆರಿಕನ್ ಹುಡುಗಿ ಮ್ಯಾಕ್ಸಿನ್ ಮೂಲಕ ಅಮೆರಿಕನ್ ಮನಸ್ಸಿನ ಉದಾರವಾದಿ ಮುಖವೊಂದನ್ನು ಲೋಹಿಯಾ ಕಂಡುಕೊಂಡರು. ಪ್ಯಾರಿಸ್ಸಿನಲ್ಲಿ ನೆಲೆಸಿದ್ದ ಆ ಹುಡುಗಿ ಲೋಹಿಯಾ ಪ್ಯಾರಿಸ್‌ಗೆ ಬಂದಾಗ ತನ್ನನ್ನು ಭೇಟಿಯಾಗಲು ಕೋರಿದ್ದಳು. ಲೋಹಿಯಾ ಭಾರತದ ಗೆಳೆಯನೊಡನೆ ಅವಳಿದ್ದ ಅಪಾರ್ಟ್‌ಮೆಂಟಿಗೆ ಹೋದರು; ಉಸ್ತುವಾರಿಯವನು ಇವರು ವರ್ಣೀಯರೆಂದು ಒಳಗೆ ಬಿಡಲಿಲ್ಲ. ಲೋಹಿಯಾ ಆಕೆಗೆ ಫೋನ್ ಮಾಡಿ ಅಲ್ಲೇ ಹತ್ತಿರದಲ್ಲಿದ್ದ ಕೆಫೆಗೆ ಬರಲು ಹೇಳಿದರು. ಸುದ್ದಿ ಕೇಳಿ ಕಣ್ಣೀರು ಹಾಕುತ್ತಾ ಬಂದ ಆಕೆ ಪಶ್ಚಿಮದ ನಾಗರಿಕತೆಯ ಕೇಡಿನ ಬಗ್ಗೆ ವ್ಯಗ್ರವಾಗಿ ಮಾತಾಡಿದಳು. ಯುರೋಪಿನ ಮಹಿಳೆಯರಲ್ಲಿ ಕಾಣದ ವಿಮರ್ಶಾ ಶಕ್ತಿ ಅಮೆರಿಕದ ಮಹಿಳೆಯರಲ್ಲಿ ಇರುವುದನ್ನು ಲೋಹಿಯಾ ಕಂಡುಕೊಂಡರು.

ಮ್ಯಾಕ್ಸಿನ್ ಥರವೇ ಆಫ್ರೋ ಅಮೆರಿಕನ್ ಕಪ್ಪು ಗಾಯಕಿ, ನಟಿ, ನರ್ತಕಿ ಜೋಸೆಫಿನ್ ಬೇಕರ್ ಕೂಡ ಅಮೆರಿಕನ್ ಹೆಣ್ಣಿನ ಶಕ್ತಿಯ ಸಂಕೇತವಾಗಿ ಲೋಹಿಯಾಗೆ ಕಂಡಿದ್ದಳು. ಅಮೆರಿಕದಲ್ಲಿ ಹುಟ್ಟಿ ಪ್ಯಾರಿಸ್ಸಿನಲ್ಲಿ ನೆಲೆಸಿದ್ದ ಜೋಸೆಫಿನ್ ಲೋಹಿಯಾರ ಮೆಚ್ಚಿನ ಕಲಾವಿದೆಯಾಗಿದ್ದಳು. ಪ್ರತಿಷ್ಠಿತ ಸಂಸ್ಥೆಯ ಚಲನಚಿತ್ರವೊಂದರಲ್ಲಿ ನಟಿಸಿದ ಮೊಟ್ಟ ಮೊದಲ ಕಪ್ಪು ನಟಿಯಾದ ಜೋಸೆಫಿನ್‌ಳನ್ನು ಜನ 'ಕಪ್ಪು ವೀನಸ್', 'ಕಪ್ಪು ಮುತ್ತು' ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ತಾನು ಬರ್ಲಿನ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ 'ಜೋಸೆಫಿನ್ ಬೇಕರ್ ಬಿರುಗಾಳಿಯಂತೆ ಇಡೀ ಪ್ಯಾರಿಸ್ಸನ್ನು ಆವರಿಸಿದ್ದಳು ಈ ಕಾಲದಲ್ಲಿ ಬೇಕನ್ ಬಿರುಗಾಳಿಯಲ್ಲಿ ನಾನೂ ತೂರಿ ಹೋಗಿದ್ದೆ' ಎಂದು ಮುಂದೊಮ್ಮೆ ಲೋಹಿಯಾ ನೆನಪಿಸಿಕೊಂಡರು.

ಲೋಹಿಯಾ ಜರ್ಮನಿ ಬಿಡುವ ಕಾಲ ಬಂದಿತ್ತು. 1932ರ ಕೊನೆಗೆ ಹಾಗೂ 1933ರ ಆರಂಭದ ಹೊತ್ತಿಗೆ ಜರ್ಮನಿಯ ರಾಜಕಾರಣದ ಮೇಲೆ ಹಿಟ್ಲರ್ ಹಿಡಿತ ಇನ್ನಷ್ಟು ಬಲವಾಗತೊಡಗಿತ್ತು. ಹಿಟ್ಲರ್ ಪಡೆಯುತ್ತಿದ್ದ ವೋಟುಗಳ ಪ್ರಮಾಣ ಹೆಚ್ಚಾಗತೊಡಗಿತ್ತು. ಹಿಟ್ಲರ್ ಅಧಿಕಾರದ ಅಂಗಳಕ್ಕೆ ಕಾಲಿಟ್ಟ ತಕ್ಷಣ ಅಧ್ಯಕ್ಷ ಹೈಂಡನ್‌ಬರ್ಗ್‌ನನ್ನು ಉರುಳಿಸಿ ತನ್ನ ಸ್ಥಾನ ಬಲಪಡಿಸಿಕೊಳ್ಳಲು ಕನ್ಸರ್ವೇಟಿವ್‌ಗಳ ಜೊತೆ ಒಳಗೊಳಗೇ ಸಂಚು ನಡೆಸುತ್ತಿದ್ದ.

ಹಿಟ್ಲರ್ ಪೂರ್ಣವಾಗಿ ಅಧಿಕಾರಕ್ಕೆ ಬಂದರೆ ನಾಝಿವಾದಿಗಳನ್ನು ಬಿಟ್ಟು ಉಳಿದ ಎಲ್ಲ ಪಕ್ಷಗಳ, ಪಂಥಗಳ ಅನುಯಾಯಿಗಳಿಗೆ ಅಪಾಯ ಬರಲಿದೆ ಎಂದು ಶೂಮಾಕರ್ ಥರದ ದೊಡ್ಡ ಚಿಂತಕರಿಗೆ ಬಲವಾಗಿ ಅನ್ನಿಸಿತ್ತು.

ವಾತಾವರಣ ಹೀಗಿರುವಾಗ ಲೋಹಿಯಾ ಆದಷ್ಟು ಬೇಗ ಸಂಶೋಧನೆ ಮುಗಿಸಿ ಇಲ್ಲಿಂದ ಹೊರಡುವುದು ಕ್ಷೇಮ ಎಂದು ಶೂಮಾಕರ್ ಎಚ್ಚರಿಸಿದರು.

(ಸಶೇಷ)